# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1286 |
| ಸದಸ್ಯರ ಹೆಸರು | : | ಡಾ: ತಳವಾರ್ ಸಾಬಣ್ಣ |
| ಉತ್ತರಿಸುವ ದಿನಾಂಕ | : | 13-03-2026. |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ನಗರದಲ್ಲಿ ರಿಂಗ್ ರೋಡ್‌ನಿಂದ ಆಳಂದಗೆ ಹೋಗುವ ರಸ್ತೆಯಲ್ಲಿ ಮತ್ತು ಶಹಾಬಾದ ರಸ್ತೆಯಲ್ಲಿ ಮುಳ್ಳು ಗಂಟೆಗಳು ಹಾಗೂ ತ್ಯಾಜ್ಯಗಳ ಮತ್ತು ಜೋಪಡಿ ಹಾಕಿಕೊಂಡು ಬದುಕುತ್ತಿರುವ ಅಲೆಮಾರಿ ಕುಟುಂಬಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; | ಗಮನಕ್ಕೆ ಬಂದಿದೆ.<br><br>ಕಲಬುರಗಿ ನಗರದ ರಿಂಗ್ ರಸ್ತೆಯಿಂದ ಆಳಂದಗೆ ಹೋಗುವ ರಸ್ತೆಯಲ್ಲಿರುವ ರಾಣೇಶ್‌ಪೀರ್ ದರ್ಗಾದ ಹತ್ತಿರ ವಾಸವಿರುವ ಅಲೆಮಾರಿ ಜನಾಂಗದ ಸ್ಥಳಕ್ಕೆ ಮುಖ್ಯರಸ್ತೆಯಿಂದ ಹೋಗಲು ಕೆ.ಕೆ.ಆರ್.ಡಿ.ಬಿ ಅನುದಾನದಲ್ಲಿ ರಸ್ತೆ ನಿರ್ಮಾಣ ಕೈಗೊಳ್ಳಲು ಕ್ರಮವಹಿಸಲಾಗುವುದು. |
| ಆ) | ಕನಿಷ್ಠ ಸೌಕರ್ಯಗಳಿಲ್ಲದೆ, ರಾತ್ರಿ ಹೊತ್ತು ಯಾವುದೇ ರಕ್ಷಣೆ ಇಲ್ಲದ ಕುಟುಂಬದ ಸದಸ್ಯರೊಂದಿಗೆ ಬದುಕುತ್ತಿರುವ ಅಲೆಮಾರಿಗಳಿಗೆ ವಸತಿ, ಶೌಚಾಲಯಗಳನ್ನು, ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳನ್ನು ಒದಗಿಸುವುದು ನಾಗರೀಕ ಸಮಾಜದ ಮತ್ತು ಸರ್ಕಾರದ ಜವಾಬ್ದಾರಿಯಲ್ಲವೆ; ಇದಕ್ಕೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; | ಕಲಬುರಗಿ ನಗರದ ರಿಂಗ್ ರೋಡ್‌ನಿಂದ ಆಳಂದಗೆ ಹೋಗುವ ರಸ್ತೆಯಲ್ಲಿರುವ ರಾಣೇಶ್‌ಪೀರ್ ದರ್ಗಾದ ಹತ್ತಿರ ಒಟ್ಟು 50 ಕುಟುಂಬಗಳಿದ್ದು, ಅವುಗಳಲ್ಲಿ 35 ಕುಟುಂಬಗಳು ನಿವೇಶನವನ್ನು ಹೊಂದಿದ್ದು, ಉಳಿದ 15 ಫಲಾನುಭವಿಗಳಿಗೆ ನಿವೇಶನಗಳಿರುವುದಿಲ್ಲ.<br><br>ಶಹಾಬಾದ್ ರಸ್ತೆಯಲ್ಲಿ ಪರಿಶಿಷ್ಟ ಜಾತಿಯ ಅಲೆಮಾರಿ ಸಮುದಾಯದ 171 ಕುಟುಂಬಗಳು ವಾಸಿಸುತ್ತಿದ್ದು, ಶ್ರೀನಗರ ಕ್ರಾಸ್‌ನಿಂದ ಬುಡ್ಗಜಂಗಮ ಕಾಲೋನಿಗೆ ಕಲಬುರಗಿ ಗ್ರಾಮೀಣ ಶಾಸಕರ ಅನುದಾನದಲ್ಲಿ ರೂ.1.00 ಕೋಟಿ ವೆಚ್ಚದಲ್ಲಿ ಪರಿಶಿಷ್ಟ ಜಾತಿ ಕಾಲೋನಿ ಅಭಿವೃದ್ಧಿ ಯೋಜನೆಯಡಿ 2023ನೇ ಸಾಲಿನಲ್ಲಿ ಸಿ.ಸಿ. ರಸ್ತೆ ನಿರ್ಮಾಣ ಮಾಡಲಾಗಿರುತ್ತದೆ.<br><br>ಶಹಾಬಾದ್ ರಸ್ತೆಯಲ್ಲಿ ಪರಿಶಿಷ್ಟ ಜಾತಿಯ ಅಲೆಮಾರಿ ಸಮುದಾಯದ ಸುಮಾರು 171 ಕುಟುಂಬಗಳಿದ್ದು, ಅವುಗಳಲ್ಲಿ 81 ಕುಟುಂಬದವರು ನಿವೇಶನವನ್ನು ಹೊಂದಿರುತ್ತಾರೆ. ಬಾಕಿ ಉಳಿದ 90 ಕುಟುಂಬಗಳಿಗೆ ನಿವೇಶನಗಳಿರುವುದಿಲ್ಲ.<br><br>ನಿವೇಶನ ಹೊಂದಿರುವವರಿಗೆ ರಾಜೀವ್‌ಗಾಂಧಿ ವಸತಿ ನಿಗಮದಿಂದ ಮನೆ ನಿರ್ಮಾಣ ಕೈಗೊಳ್ಳಲು ರೂ. 2.00 ಲಕ್ಷಗಳ ಸಾಲ ಸೌಲಭ್ಯ ಒದಗಿಸಲು ಪರಿಶೀಲಿಸಲಾಗುವುದು.<br><br>ಅಲೆಮಾರಿ ಸಮುದಾಯದವರ ಮಕ್ಕಳಿಗೆ ಕ್ರೈಸ್ ವಸತಿ ಶಾಲೆಯಲ್ಲಿ ಶೇ10% ರಷ್ಟು ಮೀಸಲಾತಿಯನ್ನು ನೀಡಿ ಶಾಲೆಗಳಿಗೆ ಪ್ರವೇಶ ಒದಗಿಸಲಾಗುತ್ತಿದೆ ಹಾಗೂ ಆಶ್ರಮ ಶಾಲೆಗಳಲ್ಲಿ 1 ರಿಂದ 5 ನೇ ತರಗತಿ ಮಕ್ಕಳಿಗೆ ಪ್ರಸ್ತುತ ಪ್ರತಿ ತರಗತಿಗೆ 25 ರಂತೆ ಒಟ್ಟು 125 ಮಕ್ಕಳಿಗೆ ಶಾಲಾ ಪ್ರವೇಶವನ್ನು ಒದಗಿಸಲಾಗುತ್ತಿದೆ. ಹಾಗೂ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ 6 ನೇ ತರಗತಿಗೆ ಸದರಿ ಸ್ಥಳಗಳಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿಯ ಅಲೆಮಾರಿ ಸಮುದಾಯದ 03 ವಿದ್ಯಾರ್ಥಿಗಳಿಗೆ ಪ್ರವೇಶ ಪರೀಕ್ಷೆಗಳಿಲ್ಲದೆ ಪ್ರವೇಶ ಒದಗಿಸಲಾಗಿದೆ. |

| | | |
|---|---|---|
| | | ಪಂಚಾಯಿತಿ ವತಿಯಿಂದ ಕುಡಿಯುವ ನೀರಿಗಾಗಿ ಬೋರ್‌ವೆಲ್ ಕೊರೆಸಲಾಗಿದೆ ಮತ್ತು ಶೌಚಾಲಯ ನಿರ್ಮಾಣಕ್ಕಾಗಿ ಸಂಬಂಧಪಟ್ಟ ಪಂಚಾಯಿತಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಪತ್ರ ಬರೆಯಲಾಗಿದೆ. |
| ಇ) | ಶ್ರೀಮಂತರು ಆಕ್ರಮಿಸಿರುವ ಜಾಗವನ್ನು ಸಕ್ರಮಗೊಳಿಸುವ ಸರ್ಕಾರ, ಈ ಅಲೆಮಾರಿ ಕುಟುಂಬಗಳು ವಾಸಿಸುತ್ತಿರುವ ಜಾಗವನ್ನು ಅವರ ಹೆಸರಿಗೆ ವರ್ಗಾಯಿಸಿ ಹಕ್ಕು ಪತ್ರಗಳನ್ನು ನೀಡಬಹುದಲ್ಲವೆ; | ಅಲೆಮಾರಿ ಕುಟುಂಬಗಳು ವಾಸಿಸುತ್ತಿರುವ ಜಾಗ ಖಾಸಗಿಯವರದಾಗಿದ್ದು, ಅವರ ಹೆಸರಿಗೆ ವರ್ಗಾಯಿಸಲು ಅವಕಾಶವಿರುವುದಿಲ್ಲ. |

**No: SWD/129/SDC/2026**

**(ಡಾ||ಹೆಚ್.ಸಿ.ಮಹದೇವಪ್ಪ)**
ಸಮಾಜ ಕಲ್ಯಾಣ ಸಚಿವರು.